**Spl.C.5092/2021**
**PW.2 CW.2 Manju**

**2 ನೇ ಅಪರ ಜಿಲ್ಲಾ ಮತ್ತು ಸತ್ರ ನ್ಯಾಯಾಲಯ,**
**ಕೊಡಗು, ಮಡಿಕೇರಿ (ಕಾರ್ಯ ನಿರ್ವಹಣೆ ವಿರಾಜಪೇಟೆ).**
**ಸ್ಪೆಷಲ್ ಕೇಸ್. ನಂ. 5092/2021**

**ಪ್ರಾಸಾ -- 2**

**ಚಾಸಾ – 2**

ಸಾಕ್ಷಿಯ ಹೆಸರು – ಮಂಜು
ತಂದೆಯ ಹೆಸರು – ಪಿ ಎಸ್ ಮಾರ
ವಯಸ್ಸು – 36 ವರ್ಷ
ವೃತ್ತಿ – ಕೂಲಿ
ವಿಳಾಸ – ನಾಲ್ಕೇರಿ ಬಣ್ಣನಮಟ್ಟೆ

ದಿಃ 21.08.2025 ರಂದು ಸಾಕ್ಷಿಗೆ ಪ್ರಮಾಣವಚನ ಬೋಧಿಸಲಾಯಿತು.

**ಮುಖ್ಯ ವಿಚಾರಣೆಃ ಮಾನ್ಯ ವಿಶೇಷ ಸರ್ಕಾರಿ ಅಭಿಯೋಜಕರವರಿಂದ**

1. ಪ್ರಾಸಾ 1 ನನ್ನ ಚಿಕ್ಕಪ್ಪ, ಚಾಸಾ 3 ಚಿಕ್ಕಮ್ಮ, ಪ್ರಾಸಾ 3 ನನ್ನ ಪತ್ನಿ. ಚಾಸಾ 5 ಗಣಪತಿ ನನ್ನ ಸಾಹುಕಾರರು. ನ್ಯಾಯಾಲಯದಲ್ಲಿರುವ ಎಲ್ಲಾ ಆರೋಪಿಗಳ ಪರಿಚಯ ಇದೆ.

2. ಚಾಸಾ 6 ಮತ್ತು 7 ರವರೂ ಸಹ ಗೊತ್ತು. ನಾನು ಪರಿಶಿಷ್ಟ ಪಂಗಡದ ಯರವ ಜನಾಂಗಕ್ಕೆ ಸೇರಿದ್ದೇನೆ. ಆರೋಪಿತರು ಕೊಡವ ಹಾಗೂ ಇತರೆ ಮೇಲ್ಜಾತಿಗೆ ಸೇರಿದ್ದಾರೆ. ಹಿಂದಿನಿಂದ ನಮ್ಮಗಳ ಪರಿಚಯ ಆರೋಪಿತರಿಗೆ ಇದೆ.

3. ದಿನಾಂಕ 12.07.2021 ರಂದು ಊರಿನಲ್ಲಿ ಹಣದ ವಿಚಾರದಲ್ಲಿ ಗಲಾಟೆ ನಡೆದು, ಆ ಸಂಬಂಧ ದಿನಾಂಕ 13.07.2021 ನಾನು, ಪ್ರಾಸಾ 1 ಹಾಗೂ ಚಾಸಾ 5 ರವರು ಕುಟ್ಟ ಪೊಲೀಸ್ ಠಾಣೆಗೆ ಹೋಗಿದ್ದೇವು, ಸದರಿ ಪ್ರಕರಣ ವಿಚಾರಣೆಯನ್ನು ಮುಗಿಸಿ

ವಾಪಸ್ಸು ಬರುವಾಗ ಸಂಜೆ 4-00 ಗಂಟೆಯ ಸಮಯದಲ್ಲಿ ಕೂಡುರೋಡು ರಸ್ತೆ, ಭರತ್ ರವರ ಅಂಗಡಿಯ ಮುಂದೆ ಬಣ್ಣಮಟ್ಟೆ ಪೈಸಾರಿ ನಾಲ್ಕೇರೆ ನಾವು ಹೋಗುತ್ತಿದ್ದ ಆಟೋವನ್ನು ನ್ಯಾಯಾಲಯದಲ್ಲಿರುವ ಆರೋಪಿತರು ನಮ್ಮನ್ನು ತಡೆದಿದ್ದಾರೆ. ಕೇಸಿಗೆ ಸಂಬಂಧಪಟ್ಟಂತೆ ನಮಗೆ ಎಲ್ಲಾ ಆರೋಪಿತರು ನನಗೆ ಹಾಗೂ ಪ್ರಾಸಾ 1 ರವರಿಗೆ ಹಲ್ಲೆ ಮಾಡಿದ್ದಾರೆ.

4. ಯಾವ ವಿಚಾರದಲ್ಲಿ ಹಲ್ಲೆ ಮಾಡಿದರೋ ಗೊತ್ತಿಲ್ಲ. ಗಲಾಟೆ ಕೇಳಿ ಚಾಸಾ 3 ಮತ್ತು 4 ರವರು ಬಂದರು. ಅವರಿಗೂ ಸಹ ಬಿಡಿಸುವಾಗ ಅವರನ್ನು ಎಳೆದಾಡಿ ಎದೆಗೆ ಹಲ್ಲೆ ಮಾಡಿದ್ದಾರೆ. ನಂತರ ಚಿಕಿತ್ಸೆಗೆ ವೈದ್ಯರ ಬಳಿ ಹೋಗಿದ್ದೇವೆ. ಪ್ರಾಸಾ 1 ರವರು ದೂರು ಕೊಟ್ಟಿದ್ದಾರೆ. ಪೊಲೀಸರು ನನ್ನನ್ನು ವಿಚಾರಣೆ ಮಾಡಿದ್ದಾರೆ.

5. ನಾನು ಪೊನ್ನಂಪೇಟೆ ನ್ಯಾಯಾಲಯದ ನ್ಯಾಯಾಧೀಶರ ಮುಂದೆ ಹೇಳಿಕೆ ನೀಡಿದ್ದೇನೆ, ಈಗ ನೋಡುತ್ತಿರುವ ಕಲಂ 164 ಸಿ ಆರ್ ಪಿ ಸಿ ಹೇಳಿಕೆಯಲ್ಲಿ ನನ್ನ ರುಜು ಇದ್ದು, ಸದರಿ ಹೇಳಿಕೆಯನ್ನು **ನಿಪಿ 5, 5(ಎ)** ಸಾಕ್ಷಿಯ ರುಜು ಎಂದು ಗುರುತಿಸಲಾಯಿತು. ನಿಪಿ 3 ಪೋಟೋದಲ್ಲಿ ಕಾಣುವ ಸ್ಥಳ ಘಟನಾ ಸ್ಥಳ.

**(ಈ ಹಂತದಲ್ಲಿ ಸಾಕ್ಷಿಯನ್ನು ಪ್ರತಿಕೂಲ ಸಾಕ್ಷಿ ಎಂದು ಪರಿಗಣಿಸಿ ಪಾಟೀ ಸವಾಲು ಮಾಡಲು ಮಾನ್ಯ ಪಿ ಪಿ ಯವರು ಅನುಮತಿ ಕೋರಿದ್ದರಿಂದ ಅನುಮತಿ ನೀಡಲಾಯಿತು)**

**ಪಾಟೀ ಸವಾಲು ಮಾನ್ಯ ವಿಶೇಷ ಸರ್ಕಾರಿ ಅಭಿಯೋಜಕರವರಿಂದ**

6. ಆರೋಪಿತರು ನನ್ನನ್ನು ಹಾಗೂ ಪ್ರಾಸಾ 1, ಚಾಸಾ 3 ಮತ್ತು 4 ರವರನ್ನು ಠಾಣೆಗೆ ಹೋಗಿ ಬಂದಿದ್ದಿರಾ ಯರವ ಸೂಳೆ ಮಕ್ಕಳು ಎಂದು ಸಾರ್ವಜನಿಕರ ಮುಂದೆ ಜಾತಿ ನಿಂದನೆ ಮಾಡಿ ಅವಮಾನಿಸಿದ್ದಾರೆ ಎಂದು ಹೇಳಿಕೆ ನೀಡಿದ್ದೇನೆ ಎಂದರೆ ಸರಿ. ಚಾಸಾ 5 ರವರು ಸಮಾಧಾನ ಮಾಡಲು ಬಂದರೂ ಸಹ ನಮಗೆ ಹಲ್ಲೆ ಮಾಡಿದ್ದಾರೆ ಎಂದರೆ ಸರಿ. ತಡೆಯಲು ಬಂದ ಚಾಸಾ 3 ಮತ್ತು 4 ರವರಿಗೆ ಭರತ್, ಕಾರ್ಯಪ್ಪ ಹಾಗೂ ನರೇಶ್ ಎಳೆದಾಡಿ ಕೈಗಳಿಂದ ಮುಖ ಮತ್ತು ಶರೀರದ ಭಾಗಕ್ಕೆ ಹೊಡೆದು ಕಾಲಿಂದ ಒದ್ದು ಮಾನಕ್ಕೆ ಚ್ಯುತಿ ಬರುವಂತೆ ಮಾಡಿದ್ದಾರೆ ಎಂದರೆ ಸರಿ. ಈ ಬಗ್ಗೆ ಹೇಳಿಕೆ ನೀಡಿದ್ದೇನೆ. ಚಾಸಾ 6 ರವರು ಜಗಳ ಬಿಡಿಸಿ ಸಮಾಧಾನ ಪಡೆಸಿದ್ದಾರೆ ಎಂದರೆ ಸರಿ. ಈ ಬಗ್ಗೆ ನಾನು ಪೊಲೀಸರಿಗೆ ಹೇಳಿಕೆ ನೀಡಿದ್ದೇನೆ ಎಂದರೆ ಸರಿ.

**ಪಾಟೀ ಸವಾಲುಃ ಶ್ರೀ ವಿ ಎಸ್ ಪಿ ಆರೋಪಿ ಪರ ವಕೀಲರಿಂದ ಇಲ್ಲ.**

7. ನಾವು ಕುಟ್ಟ ಪೊಲೀಸ್ ಠಾಣೆಗೆ ಹೋದಾಗ ರವಿ ಠಾಣೆಯಲ್ಲಿ ಇದ್ದರು, ಆ ವಿಚಾರದಲ್ಲಿ ನಾವು ಠಾಣೆಗೆ ಹೋಗಿದ್ದೇವು. ಅದು ರಾಜಿ ಸಂದಾನವಾಗಿ ಇತ್ಯರ್ಥವಾಗಿದೆ. ರವಿ ಘಟನಾ ಸ್ಥಳದಲ್ಲಿ ಇರಲಿಲ್ಲ, ಈ ಪ್ರಕರಣಕ್ಕೂ ಅವರು ಕೊಟ್ಟ ದೂರಿಗೂ ಸಂಬಂಧವಿಲ್ಲ.

8. ನಾನು ಹಾಗೂ ಚಾಸಾ 3, 5 ರವರ ಮನೆಯಲ್ಲಿ ಕೆಲಸ ಮಾಡಿಕೊಂಡು ವಾಸವಿದ್ದೇವೆ. ಅವರು ಹೇಳಿದಂತೆ ಕೆಲಸ ಮಾಡುತ್ತೇವೆ. ಗಲಾಟೆ ಸಮಯದಲ್ಲಿ ನಾವು ಆಟೋದ ಒಳಗೆ ಕುಳಿತಿದ್ದೇವು. ನನಗೆ ಎಲ್ಲಾ ಆರೋಪತರು ಒಟ್ಟಿಗೆ ಹಲ್ಲೆ

ಮಾಡಿದ್ದಾರೆ. ನನಗೆ 20 ರಿಂದ ಹೆಚ್ಚಿನ ಹೇಟು ಬಿದ್ದಿದೆ, ಲೆಕ್ಕ ಮಾಡಿಲ್ಲ. ನನಗೆ ಗಾಯವಾಗಿ ಕಣ್ಣು ಹಾಗೂ ಕಿವಿಯ ಬಳಿ ರಕ್ತ ಬಟ್ಟೆಯ ಮೇಲೆ ಬಿದ್ದಿತ್ತು. ಇದ್ದೆಲ್ಲಾ ವಿಚಾರವನ್ನು ಪೊಲೀಸರಿಗೆ ಹೇಳಿದ್ದೇನೆ. ಆಟೋದಿಂದ ಇಳಿದು ತೋಟದ ಒಳಗೆ 50 ಮೀಟರ್ ಓಡಿ ಹೋದೆ.

9. ಒಂದುವರೆ ಗಂಟೆಗೂ ಹೆಚ್ಚಿನ ಸಮಯದಲ್ಲಿ ಗಲಾಟೆ ಆಗಿದೆ. ಗಲಾಟೆಯ ಆಗುವಾಗ ಅರ್ಧ ಗಂಟೆ ಇದ್ದೆ ನಂತರ ಓಡಿ ಹೋದೆ. ಮೊದಲು ನಾನೇ ಓಡಿ ಹೋಗಿದ್ದೇನೆ. ಪ್ರಾಸಾ 1 ರವರು ಬೇರೆ ಕಡೆಗೆ ಹೋಗಿದ್ದಾರೆ. ಆ ದಿನ ಕರೊನಾ ಇದ್ದ ಕಾರಣ ಕೂಡಲೆ ಚಿಕಿತ್ಸೆಗೆ ಹೋಗಲು ಆಗಲಿಲ್ಲ, ಮರುದಿನ ಚಿಕಿತ್ಸೆ ಪಡೆದಿದ್ದೇವೆ. ಇಬ್ಬರೂ ಪೊಲೀಸರು ಬೈಕ್ ನಲ್ಲಿ ಸ್ಥಳಕ್ಕೆ ಬಂದಿದ್ದರು. ನಾನು ಸ್ಥಳದಲ್ಲಿದ್ದಾಗ ಪೊಲೀಸರು ಬಂದಿದ್ದಿಲ್ಲ. ನಾನು ಮನೆಗೆ ಹೋದಾಗ ಪೊಲೀಸರು ಅಲ್ಲಿ ಬಂದಿದ್ದಾರೆ.

10. ಅದೇ ದಿನ ರಾತ್ರಿ 10.00 ಗಂಟೆಗೆ ಪೊಲೀಸ್ ಠಾಣೆಗೆ ಹೋಗಿದ್ದೇನೆ, ಪೊಲೀಸರು ನಾನು ಹೇಳಿದಂತೆ ದಾಖಲು ಮಾಡಿಕೊಂಡಿದ್ದಾರೆ. ಮರುದಿನ ಸಹ ಪೊಲೀಸ್ ಠಾಣೆಗೆ ಹೋಗಿದ್ದೇನೆ. ಘಟನೆಯಾದ ಒಂದು ದಿನ ಬಿಟ್ಟು, ಪೊನ್ನಂಪೇಟೆಯ ನ್ಯಾಯಾಲಯಕ್ಕೆ ಹೋಗಿದ್ದೇನೆ. ನ್ಯಾಯಾಧೀಶರು ಓದಿ ಹೇಳಿದ ನಂತರ ಸಹಿ ಮಾಡಿದ್ದೇನೆ.

11. ಒಂದನೇ ಆರೋಪಿ ಹಾಗೂ ಚಾಸಾ 5 ರವರ ನಡುವೆ ಮಾತುಕತೆ

ಇಲ್ಲ. ಅವರ ನಡುವೆ ಆಸ್ತಿ ವಿಚಾರದಲ್ಲಿ ತಕರಾರು ಇದೆ ಎನ್ನುವುದು ಸರಿಯಲ್ಲ, ಆದರೆ ಬೇರೆ ವಿಚಾರದಲ್ಲಿ ಭಿನ್ನಾಭಿಪ್ರಾಯ ಇದೆ. ಚಾಸಾ 5 ರವರ ಕುಮ್ಮಕ್ಕಿನಿಂದ ಆರೋಪಿತರ ವಿರುದ್ದ ಸುಳ್ಳು ಪ್ರಕರಣ ಸೃಷ್ಟಿಸಿದ್ದೇವೆ ಎಂದರೆ ಸರಿಯಲ್ಲ. ಆರೋಪಿತರು ನಮ್ಮನ್ನು ತಡೆದು, ಅವಾಚ್ಯ ಶಬ್ದಗಳಿಂದ ಜಾತಿ ನಿಂದನೆ ಮಾಡಿ ಬೈದಿಲ್ಲ, ಹಲ್ಲೆ ಮಾಡಿ ಚಾಸಾ 3 ಮತ್ತು 5 ರವರ ಮಾನಕ್ಕೆ ಚ್ಯುತಿ ತಂದಿಲ್ಲ ಎಂದರೆ ಸರಿಯಲ್ಲ.

**(ನನ್ನ ಉಕ್ತಲೇಖನದಂತೆ ತೆರೆದ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಲಾಯಿತು)**

ಓಹೇಕೇ ಸರಿ ಇದೆ

Sd/-

2 ನೇ ಅಪರ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರು
ಕೊಡಗು-ಮಡಿಕೇರಿ (ಕಾರ್ಯ ನಿರ್ವಹಣೆ ವಿರಾಜಪೇಟೆ)